# <u>ದಾಸನೆಂತಾಗುವೆನು ಧರೆಯೊಳಗೆ ನಾನು</u>

1. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 13.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 285.
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 113.
4. **Note:** Lyrics given here are as per Ref. 1. The wordings are fully matching in all these reference books. Singer has followed these wordings.

ರಾಗ: ಕಾಂಭೋದಿ ತಾಳ: ಝಂಪೆ

ದಾಸನೆಂತಾಗುವೆನು ಧರೆಯೊಳಗೆ ನಾನು || ಪ ||
ವಾಸುದೇವನಲ್ಲಿ ಲೇಶ ಭಕುತಿಯ ಕಾಣೆ || ಅಪ ||

ಗೂಟನಾಮವ ಹೊಡೆದು ಗುಂಡು ತಂಬಿಗೆ ಹಿಡಿದು
ಗೋಟಂಚು ಧೋತರ ಮಡಿಯನುಟ್ಟು
ದಾಟುಗಾಲಿಡುತ ನಾ ಧರೆಯೊಳಗೆ ಬರಲೆನ್ನ
ಬೂಟಕತನ ನೋಡಿ ಭ್ರಮಿಸದಿರಿ ಜನರೆ || 1 ||

ಅರ್ಥದಲ್ಲೇ ಮನಸು ಆಸಕ್ತವಾಗಿದ್ದು
ವ್ಯರ್ಥವಾಯಿತು ಜನ್ಮ ವಸುಧೆಯೊಳಗೆ
ಅರ್ತಿಯಿಂದಲಿ ಹರಿಯ ಅರ್ಚಿಸಿದ್ದಿಲ್ಲ ನಾ
ಸತ್ಯ ಶೌಚಗಳರಿಯೆ ಸಜ್ಜನರು ಕೇಳಿ || 2 ||

ಇಂದಿರೇಶನ ಪೂಜೆ ಎಂದು ಮಾಡಿದ್ದಿಲ್ಲ
ಸಂಧ್ಯಾನ ಜಪ ತಪಗಳೊಂದನರಿಯೆ
ಒಂದು ಸಾಧನ ಕಾಣೆ ಪುರಂದರ ವಿಠಲನ
ದ್ವಂದ್ವ ಪಾದವ ನಂಬಿ ಅರಿತು ಭಜಿಸದಲೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಹರಿದಾಸ ದೀಕ್ಷೆಯನ್ನು ತಳೆದ ಮೇಲೆ ಅದರ ಆದರ್ಶವನ್ನು ಮನಗಂಡು ಅದನ್ನು ಸಾಧಿಸಿಕೊಳ್ಳಲು ಬೇಕಾದ ಮನೋಧರ್ಮವನ್ನೂ, ಅದಕ್ಕೆ ಇರುವ ಅಡ್ಡಿ ಆತಂಕಗಳನ್ನೂ ಹೇಳಿ ತಮ್ಮ ಅಳಲನ್ನು ಇಲ್ಲಿ ತೋಡಿಕೊಂಡಿದ್ದಾರೆ. ಹರಿದಾಸರ ವೇಷಧಾರಕರ ಸಂಖ್ಯೆ ಹೆಚ್ಚಾದ ಮಾತ್ರಕ್ಕೆ ಸಾಲದು. ಒಳಗಿನ ಪರಿಕರಗಳಿಂದಲೂ ಹರಿದಾಸರು ಸಜ್ಜಿತರಾಗಬೇಕೆಂಬ ಆಶಯ ಪುರಂದರ ದಾಸರದು.

**ಗೂಟನಾಮ** – ಭಾಗವತರೂ ಹರಿದಾಸರೂ ಧರಿಸುವ ದ್ವಾದಶನಾಮಗಳು (ಊರ್ಧ್ವಪುಂಡ್ರ).

**ಗೋಟಂಚು ಧೋತರ –** ಗೋಟು (ಕೊರಟು) ಎಂದರೆ ಮರದ ಕಾಂಡ; ಅದರಂತೆ ದಪ್ಪವಾದ ಅಂಚುಳ್ಳ ಪಂಚೆ; ಸಾಮಾನ್ಯವಾಗಿ ವೈದಿಕರು ಉಡುವಂಥದು.

**ದಾಟು ಕಾಲಿಡುತ** – ನಡೆಯುವಾಗ ನೆಲವನ್ನೇ ನೋಡಿಕೊಂಡು, ಕಾಲಿಡಬಾರದ ಸ್ಥಳಗಳನ್ನು ದಾಟಿಕೊಂಡು, ನಡೆಯುವುದು; ಇದೂ ವೈದಿಕರ ಅಭ್ಯಾಸಗಳಲ್ಲಿ ಒಂದು.

**ಬೂಟಕತನ –** ವಂಚನೆ, ಸೋಗು, ಬೂಟಾಟಿಕೆ.

**ಅರ್ಥದಲ್ಲೇ** – ಹಣದ ಸಂಪಾದನೆಯ ಕಡೆಯೇ.

**ಶೌಚ** = ಅಂತರಂಗ ಶುದ್ಧಿ ಮತ್ತು ಬಹಿರಂಗ ಶುದ್ಧಿ

**ಅರ್ತಿಯಿಂದಲಿ** – ಹರಿಯ ಪ್ರಸಾದವಾಗಬೇಕೆಂಬ ಪ್ರೀತಿಯಿಂದ.

**ಸಂಧ್ಯಾನ** – ಸಂಧ್ಯಾವಂದನ : ಹಗಲು–ಇರುಳುಗಳು ಕೂಡುವಾಗ (ಸಂಧ್ಯಾ) ಮಾಡಬೇಕಾದ ವಿಧಿ. ಸಮ್ಯಕ್ ಧ್ಯಾನ ಎಂದೂ ಆಗುತ್ತದೆ; ಚೆನ್ನಾಗಿ ಧ್ಯಾನ ಮಾಡುವುದು.

**ದ್ವಂದ್ವ ಪಾದವ** – ಪಾದ ದ್ವಂದ್ವ.

**Classification:** Keerthane
**Ankita:** purandara vittala
**Location:** NA
**Category:** Loka Neeti, Jeevana Darshana

**Sub-Category:** bhumi, Vasudeva, bhakti, gandha, mana, vyartha, Krishna, satya, sajjana, japa, tapa, puje, archane, bhajane, rokka,

**Pravachana:** NA

**Explanation:** NA